ಸ್ವಾಮಿ ರೇಮಂಡ್ ಅವರ ಚಿಂತನೆಗಳಲ್ಲಿ ಮಾತೆ ಮರಿಯಮ್ಮ

ಪ್ರೇಮಲತಾ* & ರಾಜಶೇಖರ ಜಮದಂಡಿ**

DOI: https://doi.org/10.5281/zenodo.23890361

ABSTRACT

ಸ್ವಾಮಿ ರೇಮಂಡ್ ಅವರ ಆಧ್ಯಾತ್ಮಿಕ ಚಿಂತನೆಗಳ ಹಿನ್ನೆಲೆಯಲ್ಲಿ ಮಾತೆ ಮರಿಯಮ್ಮನವರ ವ್ಯಕ್ತಿತ್ವವನ್ನು ಮಹಿಳಾ ವಿಕಾಸ ಹಾಗೂ ಜೀವನ ಮೌಲ್ಯಗಳ ದೃಷ್ಟಿಯಿಂದ ಇಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಮರಿಯಮ್ಮ ಕೇವಲ ಧಾರ್ಮಿಕ ಭಕ್ತಿಯ ಸಂಕೇತವಲ್ಲ; ಬದಲಾಗಿ ವಿಶ್ವಾಸ, ತ್ಯಾಗ, ಸೇವೆ ಮತ್ತು ಸಾಮಾಜಿಕ ಕಾಳಜಿಯ ಮೂರ್ತರೂಪ. ದೇವರ ಕರೆಯನ್ನು ಸ್ವೀಕರಿಸಿದ ರೀತಿ, ಕಾನಾದಲ್ಲಿ ತೋರಿದ ವಿವೇಚನಾಶೀಲ ನಾಯಕತ್ವ ಹಾಗೂ ಕಷ್ಟಕಾಲದ ಸ್ಥೈರ್ಯವು ಇಂದಿನ ಆಧುನಿಕ ಮಹಿಳೆಯರಿಗೆ ಶ್ರೇಷ್ಠ ಆದರ್ಶವಾಗಿದೆ. ಮಹಿಳೆಯರು ಕೇವಲ ಕೌಟುಂಬಿಕ ಪಾತ್ರಗಳಿಗೆ ಸೀಮಿತವಾಗದೆ ನೈತಿಕ, ಮಾನವೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿ ಸಕ್ರಿಯವಾಗಿ ಹಾಗೂ ಘನತೆಯಿಂದ ಬದುಕಲು ಮರಿಯಮ್ಮನ ಬದುಕು ಹೇಗೆ ದಾರಿದೀಪವಾಗಿದೆ ಎಂಬುದನ್ನು ರೇಮಂಡರ ವಿಚಾರಧಾರೆ ಹಾಗೂ ಧಾರ್ಮಿಕ ಆಕರಗಳ ಆಧಾರದ ಮೇಲೆ ಸ್ಪಷ್ಟಪಡಿಸಲಾಗಿದೆ.

KEYWORDS: ಮಾತೆ ಮರಿಯಮ್ಮ, ಸ್ವಾಮಿ ರೇಮಂಡ್, ಸ್ತ್ರೀತ್ವದ ಘನತೆ, ಜೀವನ ಮೌಲ್ಯಗಳು, ಆಧ್ಯಾತ್ಮಿಕ ಚಿಂತನೆ.

* **ಪ್ರೇಮಲತಾ**. ಸಂಶೋಧನ ವಿದ್ಯಾರ್ಥಿ, ಸಮಾಜ ವಿಜ್ಞಾನ ಮತ್ತು ಮಾನವಿಕ ವಿಭಾಗ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು.

** **ಡಾ. ರಾಜಶೇಖರ ಜಮದಂಡಿ,** ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು.

ಮಹಿಳೆಯ ಸಮಗ್ರ ವ್ಯಕ್ತಿತ್ವ ರೂಪುಗೊಳ್ಳುವಿಕೆಯಲ್ಲಿ ಆದರ್ಶ ಜೀವನ ಮೌಲ್ಯಗಳು ಮಹತ್ತರವಾದ ಪ್ರಭಾವವನ್ನು ಬೀರುತ್ತವೆ. ಕ್ರೈಸ್ತ ಪರಂಪರೆಯಲ್ಲಿ ಮಾತೆ ಮರಿಯಮ್ಮನವರು ವಿಶ್ವಾಸ, ತ್ಯಾಗ, ಪಾವಿತ್ರ್ಯ ಹಾಗೂ ಸೇವಾನಿಷ್ಠೆಯ ಪ್ರತೀಕವಾಗಿ ಗೌರವಿಸಲ್ಪಡುತ್ತಾರೆ. ದೇವರ ಕರೆಯನ್ನು ಸ್ವೀಕರಿಸಿದ ರೀತಿಯಿಂದ ಹಿಡಿದು ಜೀವನದ ವಿವಿಧ ಸವಾಲುಗಳನ್ನು ಎದುರಿಸಿದ ಸಂದರ್ಭಗಳವರೆಗೆ ಅವರ ಬದುಕು ದೃಢವಾದ ನಂಬಿಕೆ ಮತ್ತು ಆತ್ಮಸಮರ್ಪಣೆಯ ಸಂದೇಶವನ್ನು ನೀಡುತ್ತದೆ.

ಸ್ವಾಮಿ ರೇಮಂಡರ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಮರಿಯಮ್ಮರಿಗೆ ವಿಶಿಷ್ಟವಾದ ಸ್ಥಾನವಿದೆ. ಅವರ ಬದುಕಿನಲ್ಲಿದ್ದ ಸರಳತೆ, ದೇವರ ಇಚ್ಛೆಗೆ ಸಂಪೂರ್ಣ ಸಮರ್ಪಣೆ, ಸಂಕಷ್ಟಗಳಲ್ಲಿ ತೋರಿದ ಸ್ಥೈರ್ಯ ಹಾಗೂ ಇತರರ ಕುರಿತು ಹೊಂದಿದ್ದ ಕಾಳಜಿ ಇವುಗಳನ್ನು ರೇಮಂಡ್ ಅವರು ಅನುಕರಣೀಯ ಗುಣಗಳೆಂದು ಪ್ರತಿಪಾದಿಸಿದ್ದಾರೆ. ಈ ಗುಣಗಳು ಮಹಿಳೆಯರ ಆತ್ಮವಿಕಾಸ, ನೈತಿಕಪ್ರಜ್ಞೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವಲ್ಲಿ ಪ್ರೇರಣೆಯಾಗಬಲ್ಲವು. ಆದ್ದರಿಂದ, ಸ್ವಾಮಿ ರೇಮಂಡರ ಬರಹಗಳು ಮತ್ತು ಚಿಂತನೆಗಳ ಹಿನ್ನೆಲೆಯಲ್ಲಿ ಮರಿಯಮ್ಮನ ವ್ಯಕ್ತಿತ್ವವನ್ನು ಅಧ್ಯಯನ ಮಾಡುವುದು ಧಾರ್ಮಿಕ ದೃಷ್ಟಿಯಿಂದ ಮಾತ್ರವಲ್ಲದೆ, ಮಹಿಳೆಯರ ಜೀವನ ಮೌಲ್ಯಗಳ ಅಧ್ಯಯನದ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಈ ಲೇಖನವು ಮರಿಯಮ್ಮನ ಜೀವನದಲ್ಲಿ ವ್ಯಕ್ತವಾಗುವ ಪ್ರಮುಖ ಗುಣಗಳನ್ನು ಗುರುತಿಸಿ, ಅವುಗಳ ಸಮಕಾಲೀನ ಪ್ರಸ್ತುತತೆಯನ್ನು ಪರಿಶೀಲಿಸುತ್ತದೆ. ರೇಮಂಡರ ಆಧ್ಯಾತ್ಮಿಕ ವಿಚಾರಧಾರೆಯಲ್ಲಿ ಮಾತೆ ಮರಿಯಮ್ಮರಿಗೆ ದೊರೆತ ಸ್ಥಾನವನ್ನು ಗುರುತಿಸುವುದಾಗಿದೆ.

ಮರಿಯಮ್ಮನ ಕುರಿತು ಅವರು ಪ್ರತಿಪಾದಿಸಿರುವ ಪ್ರಮುಖ ಗುಣವೈಶಿಷ್ಟ್ಯಗಳನ್ನು ಅನಾವರಣಗೊಳಿಸುವುದು ಮತ್ತು ದೇವರೊಂದಿಗೆ ಮರಿಯಮ್ಮ ಹೊಂದಿದ ಸಂಬಂಧದ ಕುರಿತು ರೇಮಂಡರ ದೃಷ್ಟಿಕೋನವನ್ನು ಪರಿಶೀಲಿಸುವುದು. ಮರಿಯಮ್ಮನ ಆದರ್ಶಗಳು ಸಮಕಾಲೀನ ಮಹಿಳಾ ಜೀವನಕ್ಕೆ ನೀಡಬಹುದಾದ ಪ್ರೇರಣೆಯನ್ನು ಗುರುತಿಸುವುದು ಮತ್ತು ರೇಮಂಡ್ ಅವರ ಧಾರ್ಮಿಕ ಮತ್ತು ನೈತಿಕ ಮಹತ್ವವನ್ನು ನಿರೂಪಿಸುವ ಉದ್ದೇಶವನ್ನು ಹೊಂದಿದೆ.

ವಿಧಾನ: ಈ ಅಧ್ಯಯನಕ್ಕೆ ವಿವರಣಾತ್ಮಕ, ವಿಶ್ಲೇಷಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ರೇಮಂಡರ ಮರಿಯಮ್ಮನ ಕುರಿತ ಬರಹಗಳು, ಉಪದೇಶಗಳು, ಧ್ಯಾನವಿಷಯಗಳು ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಪ್ರಾಥಮಿಕ ಆಕರಗ್ರಂಥಗಳಾಗಿ ಪರಿಗಣಿಸಲಾಗಿದೆ. ಇದರ ಜೊತೆಗೆ ಪವಿತ್ರಬೈಬಲ್, ಕಥೋಲಿಕ ಚರ್ಚಿನ ಅಧಿಕೃತ ಬೋಧನೆಗಳು, ಮರಿಯಮ್ಮನ ಕುರಿತು ಪ್ರಕಟಣೆಗೊಂಡ ಧಾರ್ಮಿಕ ಗ್ರಂಥಗಳನ್ನು ಪೂರಕ ಆಕರಗಳಾಗಿ ಬಳಸಲಾಗಿದೆ.

ಫಲಿತಾಂಶ: ಅಧ್ಯಯನದ ಆಧಾರದ ಮೇಲೆ ರೇಮಂಡರ ಚಿಂತನೆಗಳಲ್ಲಿ

ಮಾತೆ ಮರಿಯಮ್ಮರು ವಿಶ್ವಾಸ ಮತ್ತು ಸಮರ್ಪಣೆಯ ಪ್ರತಿರೂಪವಾಗಿ ಮೂಡಿಬರುತ್ತಾರೆ ಎಂಬುದು ಕಂಡುಬರುತ್ತದೆ. ದೇವರ ಕರೆಯನ್ನು ಸ್ವೀಕರಿಸಿದ ಮನೋಭಾವ, ತಮ್ಮ ಜೀವನದ ಪರಿಸ್ಥಿತಿಗಳನ್ನು ನಂಬಿಕೆಯಿಂದ ಎದುರಿಸಿದ ದೃಢತೆ ಮತ್ತು ದೇವರ ಚಿತ್ತಕ್ಕೆ ಆದ್ಯತೆ ನೀಡಿದ ಜೀವನ ಕ್ರಮವು ಅವರ ಆಧ್ಯಾತ್ಮಿಕ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ರೇಮಂಡರ ದೃಷ್ಟಿಯಲ್ಲಿ ಮರಿಯಮ್ಮನ ಮಹತ್ವವು ಕೇವಲ ಅವರ ಮಾತೃತ್ವದಲ್ಲಿ ಅಲ್ಲ; ಬದಲಾಗಿ ದೇವರ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಅವರ ಮುಕ್ತಮನಸ್ಸು, ತ್ಯಾಗ ಪ್ರವೃತ್ತಿ ಮತ್ತು ಸಂಕಷ್ಟ ಸಹನೆಯಲ್ಲೂ ಅಡಕವಾಗಿದೆ. ಈ ಗುಣಗಳು ಮಹಿಳೆಯರ ಜೀವನದಲ್ಲಿ ಆತ್ಮವಿಶ್ವಾಸ, ಹೊಣೆಗಾರಿಕೆ ಸೇವಾನಿಷ್ಠೆ ಮತ್ತು ಮೌಲ್ಯಪ್ರಜ್ಞೆಯನ್ನು ಬೆಳೆಸುವ ಪ್ರೇರಕ ಅಂಶಗಳಾಗಬಹುದು.

ಅಧ್ಯಯನವು ಮತ್ತೊಂದು ಪ್ರಮುಖ ಸಂಗತಿಯನ್ನು ಸೂಚಿಸುತ್ತದೆ: ಮರಿಯಮ್ಮನ ಆದರ್ಶವು ಕೇವಲ ವೈಯಕ್ತಿಕ ಭಕ್ತಿಗೆ ಸೀಮಿತವಾಗದೆ, ಇತರರ ನೋವು ಮತ್ತು ಅಗತ್ಯಗಳನ್ನು ಅರಿತುಕೊಳ್ಳುವ ಮಾನವೀಯ ಮನೋಭಾವಕ್ಕೂ ದಾರಿ ತೋರಿಸುತ್ತದೆ. ಹೀಗಾಗಿ ಅವರ ವ್ಯಕ್ತಿತ್ವವು ಆಧ್ಯಾತ್ಮಿಕತೆಯೊಂದಿಗೆ ಮಾನವೀಯತೆಯನ್ನು ಸಂಯೋಜಿಸುವ ಮಾದರಿಯಾಗಿ ಅರ್ಥೈಸಬಹುದು.

ಮೌಲ್ಯ: ಈ ಸಂಶೋಧನೆಯ ಮೌಲ್ಯವನ್ನು ಹಲವು ನೆಲೆಗಳಲ್ಲಿ ಗುರುತಿಸಬಹುದು. ಆಧ್ಯಾತ್ಮಿಕ ಮೌಲ್ಯ: ದೇವರ ಮೇಲೆ ಸಂಪೂರ್ಣ ಭರವಸೆಯಿಟ್ಟು, ಜೀವನದ ಏರಿಳಿತಗಳನ್ನು ನಂಬಿಕೆಯಿಂದ ಸ್ವೀಕರಿಸುವ ಮನೋಭಾವವನ್ನು ಬೆಳೆಸಲು ಮರಿಯಮ್ಮನ ಜೀವನ ಮಾರ್ಗದರ್ಶನ ನೀಡುತ್ತದೆ. ನೈತಿಕ ಮೌಲ್ಯ: ನಮ್ರತೆ, ವಿಧೇಯತೆ, ತ್ಯಾಗ, ಸಹನೆ ಮತ್ತು ಪಾವಿತ್ರ್ಯದಂತಹ ಗುಣಗಳು ವ್ಯಕ್ತಿಯ ಚಾರಿತ್ರ್ಯವನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತವೆ. ಮಾನವೀಯ ಮೌಲ್ಯ: ಇತರರ ನೋವಿಗೆ ಸ್ಪಂದಿಸುವುದು, ಅಗತ್ಯದಲ್ಲಿರುವವರಿಗೆ ನೆರವಾಗುವುದು ಮತ್ತು ಸಂಬಂಧಗಳಲ್ಲಿ ಪ್ರೀತಿಯನ್ನು ವ್ಯಕ್ತಪಡಿಸುವ ಗುಣಗಳಿಗೆ ಅವರ ಬದುಕು ಮಹತ್ವ ನೀಡುತ್ತದೆ.

ಮಹಿಳಾ ಜೀವನದ ದೃಷ್ಟಿಯಿಂದ: ಮರಿಯಮ್ಮನ ವ್ಯಕ್ತಿತ್ವವು ಮಹಿಳೆಯರನ್ನು ಕೇವಲ ಕುಟುಂಬದ ಪಾತ್ರಗಳ ಮೂಲಕ ನಿರ್ವಹಿಸುವುದಕ್ಕಿಂತ, ನಂಬಿಕೆ, ವಿವೇಕ, ಧೈರ್ಯ, ತ್ಯಾಗ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿರುವ ವ್ಯಕ್ತಿಗಳಾಗಿ ಅರ್ಥೈಸಲು ಅವಕಾಶ ನೀಡುತ್ತದೆ.

ಕಥೋಲಿಕ ಆಧ್ಯಾತ್ಮಿಕ ಪರಂಪರೆಯಲ್ಲಿ ಪವಿತ್ರ ಮರಿಯಮ್ಮನ ಭಕ್ತಿಗೆ ವಿಶಿಷ್ಟ ಸ್ಥಾನವಿದೆ. ಯೇಸು ಕ್ರಿಸ್ತನ ತಾಯಿ, ದೇವರ ಚಿತ್ತಕ್ಕೆ ಸಂಪೂರ್ಣವಾಗಿ ವಿಧೇಯಳಾದ ಸೇವಕಿ ಮತ್ತು ವಿಶ್ವಾಸದ ಆದರ್ಶಸ್ವರೂಪಳಾಗಿ ಮರಿಯಮ್ಮನವರನ್ನು ಪರಿಗಣಿಸಲಾಗುತ್ತದೆ. ಈ ಮರಿಯಮ್ಮನ ಭಕ್ತಿ ಕ್ರೈಸ್ತ ಆಧ್ಯಾತ್ಮಿಕತೆಯ ಒಂದು ಪ್ರಮುಖ ಆಯಾಮವಾಗಿದ್ದು, ಪ್ರಾರ್ಥನೆ, ವಿನಯ, ವಿಧೇಯತೆ, ತ್ಯಾಗ, ಪರಿಶುದ್ಧತೆ ಮತ್ತು ಸೇವಾಭಾವವನ್ನು ಬೆಳೆಸುವ ಸಾಧನವಾಗಿ ರೂಪುಗೊಂಡಿದೆ.

ರೇಮಂಡರ ಆಧ್ಯಾತ್ಮಿಕ ಚಿಂತನೆಗಳಲ್ಲಿ ಪವಿತ್ರ ಮರಿಯಮ್ಮನಿಗೆ ವಿಶೇಷವಾದ ಗೌರವ ಮತ್ತು ಭಕ್ತಿಭಾವ ವ್ಯಕ್ತವಾಗುತ್ತದೆ. ಮರಿಯಮ್ಮನವರನ್ನು ಕೇವಲ ಯೇಸುವಿನ ತಾಯಿಯಾಗಿ ಮಾತ್ರವಲ್ಲದೆ, ಕ್ರೈಸ್ತ ಜೀವನದ ಆದರ್ಶವಾಗಿ ಅವರು ಕಾಣುತ್ತಾರೆ. ದೇವರ ಕರೆಯನ್ನು ಸಂಪೂರ್ಣ ವಿಶ್ವಾಸದಿಂದ ಸ್ವೀಕರಿಸಿದ ಮರಿಯಮ್ಮನವರ ಜೀವನವು, ದೇವರ ಚಿತ್ತಕ್ಕೆ ತನ್ನನ್ನು ಸಮರ್ಪಿಸಿಕೊಂಡು ಬದುಕಬೇಕೆಂಬ ಸಂದೇಶವನ್ನು ನೀಡುತ್ತದೆ. ಆದ್ದರಿಂದ ಸ್ಥಾಪಕರ ದೃಷ್ಟಿಯಲ್ಲಿ ಮರಿಯಮ್ಮನ ಭಕ್ತಿ ಭಾವನಾತ್ಮಕ ಆರಾಧನೆಗೆ ಸೀಮಿತವಾಗದೆ, ಆಕೆಯ ಗುಣಗಳನ್ನು ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಆಧ್ಯಾತ್ಮಿಕ ಮಾರ್ಗವಾಗಿದೆ. ಮರಿಯಮ್ಮನವರ ವಿನಯ ಮತ್ತು ವಿಧೇಯತೆ ಸ್ಥಾಪಕರಿಗೆ ವಿಶೇಷವಾಗಿ ಪ್ರೇರಣಾದಾಯಕವಾಗಿದೆ.[1]

ಮಹಿಳೆಯ ವ್ಯಕ್ತಿತ್ವ ವಿಕಾಸವು ಕುಟುಂಬ ಮತ್ತು ಸಮಾಜದ ಬೆಳವಣಿಗೆಯೊಂದಿಗೆ ನಿಕಟವಾಗಿ ಸಂಬಂಧಿಸಿದೆ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸುವುದು, ನಂಬಿಕೆಯಲ್ಲಿ ಸ್ಥಿರವಾಗಿರುವುದು, ಕರ್ತವ್ಯ ಪ್ರಜ್ಞೆಯಿಂದ ನಡೆದುಕೊಳ್ಳುವುದು ತ್ಯಾಗ ಮತ್ತು ಸೇವಾ ಭಾವವನ್ನು ಬೆಳೆಸಿಕೊಳ್ಳುವುದು ವ್ಯಕ್ತಿತ್ವದ ಪ್ರಮುಖ ಲಕ್ಷಣಗಳಾಗಿವೆ. ಇಂತಹ ಮೌಲ್ಯಗಳನ್ನು ತನ್ನ ಜೀವನದ ಮೂಲಕ ಪ್ರತಿಬಿಂಬಿಸಿದ ಆದರ್ಶ ವ್ಯಕ್ತಿತ್ವವಾಗಿ ಕ್ರೈಸ್ತ ಪರಂಪರೆಯಲ್ಲಿ ಮಾತೆ ಮರಿಯಮ್ಮರಿಗೆ ವಿಶಿಷ್ಟ ಸ್ಥಾನವಿದೆ.

ಪವಿತ್ರ ಕನ್ಯಾಮರಿಯಮ್ಮನ ಶ್ರೇಷ್ಠತೆ

ರೇಮಂಡರ ಚಿಂತನೆಗಳಲ್ಲಿ ಪವಿತ್ರ ಕನ್ಯಾಮರಿಯಮ್ಮನ ವ್ಯಕ್ತಿತ್ವವು ಸರಳತೆ, ವಿನಯ, ತ್ಯಾಗ, ನಂಬಿಕೆ ಮತ್ತು ಕೃಪಾಪೂರ್ಣತೆಯ ಸಮನ್ವಯವಾಗಿ ಪ್ರತಿಬಿಂಬಿಸುತ್ತದೆ. ಅವರ ದೃಷ್ಟಿಯಲ್ಲಿ ಮರಿಯಮ್ಮ ಯಾರು? ಎಂಬ ಪ್ರಶ್ನೆಗೆ ಉತ್ತರವನ್ನು ಆಕೆಯ ಬಾಹ್ಯ ವೈಭವದಲ್ಲಿ ಹುಡುಕುವುದಕ್ಕಿಂತ ಆಕೆಯ ಆಂತರಿಕ ಪಾವಿತ್ರ್ಯ ಹಾಗೂ ದೇವರೊಂದಿಗೆ ಹೊಂದಿದ್ದ ಆಳವಾದ ಸಂಬಂಧದಲ್ಲಿ ಕಾಣಬೇಕು.[2] ಮಾನವನ ದೃಷ್ಟಿಕೋನದಿಂದ ನೋಡಿದಾಗ ಮರಿಯಮ್ಮ ಯೂದಾಯದ ಸಾಮಾನ್ಯ ಹಾಗೂ ಬಡ ಮಹಿಳೆಯಾಗಿ ಕಾಣುತ್ತಾಳೆ. ದಾವೀದನ ರಾಜವಂಶದ ವಂಶಪಾರಂಪರ್ಯಕ್ಕೆ ಸೇರಿದವಳಾಗಿದ್ದರೂ, ಆಕೆಯ ಜೀವನವು ರಾಜಮನೆತನದ ಸೌಕರ್ಯಗಳಿಂದ ಕೂಡಿರಲಿಲ್ಲ. ಬದಲಾಗಿ ಜೀವನದ ಅನೇಕ ಕೊರತೆಗಳು, ಸಂಕಷ್ಟಗಳು ಮತ್ತು ಪ್ರತಿಕೂಲ ಪರಿಸ್ಥಿತಿಗಳನ್ನು ಆಕೆ ಧೈರ್ಯದಿಂದ ಎದುರಿಸಿದಳು. ಬಡ ಕುಶಲಕರ್ಮಿಯಾಗಿದ್ದ ಜೋಸೇಫನೊಂದಿಗೆ ವಿವಾಹವಾದ ನಂತರ, ಯಾವುದೇ ಸೇವಕರ ನೆರವಿಲ್ಲದೆ ಮನೆಯ ಜವಾಬ್ದಾರಿಗಳನ್ನು ಸ್ವತಃ ನಿರ್ವಹಿಸುತ್ತಾ ಸರಳ ಬದುಕನ್ನು ನಡೆಸಿದಳು, ಈ ಅಂಶವು ಮರಿಯಮ್ಮನ ಜೀವನದಲ್ಲಿದ್ದ ವಿನಯ ಮತ್ತು ಪರಿಶ್ರಮದ ಮೌಲ್ಯವನ್ನು ಸ್ಪಷ್ಟಪಡಿಸುತ್ತದೆ.

ಮರಿಯಮ್ಮನ ಭೌತಿಕ ಜೀವನದಲ್ಲಿ ಅಸಾಧಾರಣ ಘಟನೆಗಳು ಬಹಳವಾಗಿ ಗೋಚರಿಸುವುದಿಲ್ಲ. ಆಕೆ ಮಾಡಿದ ಮಹತ್ವದ ಕಾರ್ಯಗಳು ಬಹುತೇಕ

ಮೌನದಲ್ಲಿಯೇ ನೆರವೇರಿದವು. ಆದಾಗ್ಯೂ, ಕಾನಾದ ವಿವಾಹ ಸಮಾರಂಭದಲ್ಲಿ ಯೇಸು ಮಾಡಿದ ಮೊದಲ ಅದ್ಭುತಕ್ಕೆ ಆಕೆಯ ಮಧ್ಯಸ್ಥಿಕೆ ಕಾರಣವಾಯಿತು ಎಂಬುದನ್ನು ಸುವಾರ್ತೆ ದಾಖಲಿಸುತ್ತದೆ. ಹೀಗಾಗಿ ಮಾನವರ ಕಣ್ಣಿಗೆ ಸಾಮಾನ್ಯಳಾಗಿ ಆಕೆ ಕಾಣಿಸಿಕೊಂಡರೂ, ದೇವರ ಯೋಜನೆಯಲ್ಲಿ ಮರಿಯಮ್ಮನ ಸ್ಥಾನ ಅತ್ಯಂತ ವಿಶಿಷ್ಟವಾಗಿತ್ತು.[3]

ರೇಮಂಡರ ಚಿಂತನೆಯ ಪ್ರಕಾರ, ಸರ್ವಶಕ್ತನಾದ ದೇವರು ಸೃಷ್ಟಿಸಿದ ಸ್ತ್ರೀಯರಲ್ಲಿ ಮರಿಯಮ್ಮ ವಿಶಿಷ್ಟವಾದ ಕೃಪೆಯ ಪಾತ್ರಳಾಗಿದ್ದಾಳೆ. ಆಕೆ "ಕೃಪಾಪೂರ್ಣಳು" ಎಂಬ ದೇವದೂತನ ಸಂಬೋಧನೆಯನ್ನು ಪಡೆದವಳು. ಈ ಅಭಿವಂದನೆಯು ಆಕೆಯ ಆಂತರಿಕ ಪಾವಿತ್ರ್ಯದ ಮಹತ್ವವನ್ನು ಸೂಚಿಸುತ್ತದೆ. ದೇವರ ಕೃಪೆ ಆತ್ಮವನ್ನು ಎಷ್ಟರಮಟ್ಟಿಗೆ ಪರಿಪೂರ್ಣಗೊಳಿಸುತ್ತದೆಯೋ, ಅಷ್ಟೇ ಆ ಆತ್ಮವು ದೇವರಿಗೆ ಸಮೀಪವಾಗುತ್ತದೆ ಮತ್ತು ಆತನ ಪರಿಪೂರ್ಣ ಗುಣಗಳನ್ನು ಪ್ರತಿಬಿಂಬಿಸುತ್ತದೆ. ಈ ದೃಷ್ಟಿಯಿಂದ ಮರಿಯಮ್ಮ ದೇವರೊಂದಿಗೆ ಅತ್ಯಂತ ಆಪ್ತವಾದ ಸಂಬಂಧ ಹೊಂದಿದವಳಾಗಿ ಪರಿಗಣಿಸಲ್ಪಡುತ್ತಾಳೆ.[4]

ಗಾಬ್ರಿಯೆಲ್ ದೇವದೂತನ ಸಂದೇಶ:

ಲೂಕ 1:26–37ರಲ್ಲಿನ ದೇವದೂತ ಗಬ್ರಿಯೇಲನ ಸಂದೇಶವು ಮರಿಯಮ್ಮನ ಜೀವನದಲ್ಲಿ ದೇವರ ಕರೆಯು ಹೇಗೆ ಪ್ರಕಟವಾಯಿತು ಎಂಬುದನ್ನು ತೋರಿಸುವ ಮಹತ್ವದ ಬೈಬಲ್ ಭಾಗವಾಗಿದೆ. ಇಲ್ಲಿ ಮರಿಯಮ್ಮ ಕೇವಲ ಯೇಸುವಿನ ತಾಯಿಯಾಗಿ ಮಾತ್ರವಲ್ಲದೆ, ದೇವರ ಯೋಜನೆಯನ್ನು ಸ್ವೀಕರಿಸಿದ ನಂಬಿಕೆಯ ಮಹಿಳೆ, ವಿನಯದ ಪ್ರತಿರೂಪ ಮತ್ತು ಸಂಪೂರ್ಣ ಸಮರ್ಪಣೆಯ ಮಾದರಿಯಾಗಿ ಚಿತ್ರಿತಳಾಗುತ್ತಾಳೆ.

ಮೊದಲನೆಯದಾಗಿ ಮರಿಯಮ್ಮನ ಆಯ್ಕೆ ಮಾನವೀಯ ಸಾಮರ್ಥ್ಯ, ಸಾಮಾಜಿಕ ಸ್ಥಾನಮಾನ ಅಥವಾ ಅಧಿಕಾರದ ಆಧಾರದ ಮೇಲೆ ನಡೆದದ್ದಲ್ಲ; ಅದು ದೇವರ ಕೃಪೆ ಮತ್ತು ಯೋಜನೆಯ ಫಲವಾಗಿದೆ. ಈ ಅಂಶವು ಕ್ರೈಸ್ತ ಆಧ್ಯಾತ್ಮಿಕತೆಯಲ್ಲಿ ದೇವರ ಕರೆಯು ಮೊದಲು ಬರುತ್ತದೆ ಮತ್ತು ಮಾನವನ ಪ್ರತಿಕ್ರಿಯೆ ಅದನ್ನು ಅನುಸರಿಸುತ್ತದೆ ಎಂಬ ಸತ್ಯವನ್ನು ವ್ಯಕ್ತಪಡಿಸುತ್ತದೆ.[5]

ಎರಡನೆಯದಾಗಿ, ಮರಿಯಮ್ಮನ ಗೊಂದಲ ಮತ್ತು ಪ್ರಶ್ನೆ ಗಮನಾರ್ಹವಾಗಿದೆ. ದೇವದೂತನ ಸಂದೇಶವನ್ನು ಕೇಳಿದಾಗ ಅವಳು ತಕ್ಷಣವೇ ಅರ್ಥಮಾಡಿಕೊಂಡು ಪ್ರತಿಕ್ರಿಯಿಸುವುದಿಲ್ಲ. ''ಇದು ಹೇಗೆ ಸಂಭವಿಸಬಹುದು ಎಂಬ ಅವಳ ಪ್ರಶ್ನೆಯು ಅವಿಶ್ವಾಸದ ಸೂಚನೆಯಾಗಿರದೆ, ದೇವರ ಯೋಜನೆಯನ್ನು ಅರಿತುಕೊಳ್ಳುವ ಪ್ರಾಮಾಣಿಕ ಪ್ರಯತ್ನವಾಗಿದೆ. ಇದರಿಂದ ಮರಿಯಮ್ಮನ ನಂಬಿಕೆ ಅಂಧ ಸ್ವೀಕಾರವಲ್ಲ; ಅದು ಆಲೋಚನೆ, ವಿಚಾರಣೆ ಮತ್ತು ಅಂತಿಮವಾಗಿ ದೇವರ ಮೇಲಿನ ವಿಶ್ವಾಸಕ್ಕೆ ದಾರಿ ಮಾಡುವ ನಂಬಿಕೆ ಎಂಬುದನ್ನು ಗ್ರಹಿಸಬಹುದು.[6]

ಮೂರನೆಯದಾಗಿ, ದೇವದೂತನು ಪವಿತ್ರಾತ್ಮನ ಕಾರ್ಯವನ್ನು ವಿವರಿಸುವ ಮೂಲಕ ಯೇಸುವಿನ ಜನ್ಮವು ಸಂಪೂರ್ಣವಾಗಿ ದೇವರ ಕಾರ್ಯ ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ''ಪವಿತ್ರಾತ್ಮನು ನಿನ್ನ ಮೇಲೆ ಇಳಿಯುವನು'' ಎಂಬ ಮಾತು ಮರಿಯಮ್ಮನ ಪಾತ್ರವನ್ನು ದೇವರ ರಕ್ಷಣಾ ಯೋಜನೆಯೊಂದಿಗೆ ನೇರವಾಗಿ ಸಂಪರ್ಕಿಸುತ್ತದೆ.[7]

ನಾಲ್ಕನೆಯದಾಗಿ, ''ದೇವರಿಗೆ ಅಸಾಧ್ಯವಾದುದು ಯಾವುದೂ ಇಲ್ಲ''[8] ಎಂಬ ದೇವದೂತನ ಘೋಷಣೆ ಈ ಘಟನೆಯ ಕೇಂದ್ರ ಸಂದೇಶವಾಗಿದೆ. ಮಾನವ ದೃಷ್ಟಿಯಿಂದ ಅಸಾಧ್ಯವೆನಿಸುವ ಪರಿಸ್ಥಿತಿಗಳಲ್ಲಿಯೂ ದೇವರ ಶಕ್ತಿಯ ಮೇಲೆ ಭರವಸೆ ಇಡುವ ನಂಬಿಕೆಯನ್ನು ಇದು ಪ್ರತಿಪಾದಿಸುತ್ತದೆ. ಆದ್ದರಿಂದ ಮರಿಯಮ್ಮನ ವ್ಯಕ್ತಿತ್ವವು ವಿಶ್ವಾಸ, ನಿರೀಕ್ಷೆ ಮತ್ತು ದೇವರ ಮೇಲಿನ ಸಂಪೂರ್ಣ ಅವಲಂಬನೆಯ ಮಾದರಿಯಾಗಿ ಬೆಳಕಿಗೆ ಬರುತ್ತದೆ.

ಮಾತೆಮರಿಯಮ್ಮ ಮತ್ತು ಎಲಿಜಬೆತ್ತಳ ಭೇಟಿ

ದೇವದೂತ ಗಬ್ರಿಯೇಲನು ದೇವರ ಯೋಜನೆಯನ್ನು ತಿಳಿಸಿದ ನಂತರ, ಮರಿಯಮ್ಮ ತಾನು ಗರ್ಭಿಣಿಯಾಗಿರುವ ಎಲಿಜಬೆತ್ತಳನ್ನು ಭೇಟಿಯಾಗಲು ಯೂದಾಯದ ಬೆಟ್ಟ ಪ್ರದೇಶಕ್ಕೆ ತ್ವರಿತವಾಗಿ ಪ್ರಯಾಣಿಸುತ್ತಾರೆ. ಎಲಿಜಬೆತ್ತಳು ವೃದ್ಧಾಪ್ಯದಲ್ಲಿಯೂ ದೇವರ ಕೃಪೆಯಿಂದ ಗರ್ಭಧರಿಸಿದ್ದಾಳೆ ಎಂಬ ವಿಷಯವನ್ನು ತಿಳಿದಿದ್ದ ಮರಿಯಮ್ಮ, ಆಕೆಯ ಪರಿಸ್ಥಿತಿಯನ್ನು ಅರಿತು ಸಮೀಪಿಸುವುದು ಕೇವಲ ಬಂಧುತ್ವದ ಭೇಟಿಯಾಗಿರಲಿಲ್ಲ; ಅದು ಸಹಾನುಭೂತಿ, ಸಹಭಾಗಿತ್ವ ಮತ್ತು ಸೇವೆಯ ಕ್ರಿಯೆಯಾಗಿತ್ತು.[9]

ಎಲಿಜಬೆತ್ತಳನ್ನು ಭೇಟಿಯಾದಾಗ ಮರಿಯಮ್ಮನ ಆಗಮನವೇ ಆಕೆಯ ಮನೆಯಲ್ಲಿ ಸಂತೋಷದ ಕಾರಣವಾಗುತ್ತದೆ. ಮರಿಯಮ್ಮನ ವಂದನೆಯನ್ನು ಕೇಳಿದ ಕೂಡಲೇ ಎಲಿಜಬೆತ್ತಳ ಗರ್ಭದಲ್ಲಿದ್ದ ಶಿಶು ಹರ್ಷದಿಂದ ಕುಣಿಯಿತು. ಪವಿತ್ರಾತ್ಮದಿಂದ ತುಂಬಿದ ಎಲಿಜಬೆತ್ತಳು ಮರಿಯಮ್ಮನನ್ನು ''ಸ್ತ್ರೀಯರಲ್ಲಿ ನೀನು ಧನ್ಯಳು'' ಎಂದು ಕೊಂಡಾಡುತ್ತಾ[10] ಈ ಘಟನೆ ಮರಿಯಮ್ಮನಲ್ಲಿದ್ದ ದೇವರ ಕೃಪೆಯು ಇತರರ ಜೀವನದಲ್ಲಿಯೂ ಸಂತೋಷ ಮತ್ತು ಆಶೀರ್ವಾದವನ್ನು ಉಂಟುಮಾಡುವ ಶಕ್ತಿಯನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ.

ಇಲ್ಲಿ ಗಮನಾರ್ಹವಾದ ಅಂಶವೆಂದರೆ, ದೇವರಿಂದ ವಿಶಿಷ್ಟವಾದ ಕರೆಯನ್ನು ಸ್ವೀಕರಿಸಿದ ತಕ್ಷಣ ಮರಿಯಮ್ಮ ತಮ್ಮ ಮಹತ್ವವನ್ನು ಪ್ರದರ್ಶಿಸುವುದಕ್ಕಿಂತ, ಅಗತ್ಯದಲ್ಲಿದ್ದ ಬಂಧುವಿನ ಬಳಿಗೆ ತೆರಳುತ್ತಾರೆ. ದೇವರ ಅನುಗ್ರಹವನ್ನು ಪಡೆದ ವ್ಯಕ್ತಿಯ ನಿಜವಾದ ಶ್ರೇಷ್ಠತೆ ಆತ್ಮಕೇಂದ್ರಿತತೆಯಲ್ಲಿ ಅಲ್ಲ; ಅದು ಇತರರ ನೋವು, ಅಗತ್ಯ ಮತ್ತು ಪರಿಸ್ಥಿತಿಗಳನ್ನು ಅರಿತು ಅವರಿಗೆ ನೆರವಾಗುವುದರಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಮರಿಯಮ್ಮನ ಜೀವನವು ದೇವಾನುಭವವು ಸೇವೆಯಾಗಿ

ಪರಿವರ್ತಿತವಾಗಬೇಕು ಎಂಬ ಮೌಲ್ಯವನ್ನು ಪ್ರತಿಪಾದಿಸುತ್ತದೆ.

ಚರ್ಚಿನ ಸಾಕ್ಷ್ಯ ಮತ್ತು ಪರಂಪರೆ

ಮರಿಯಮ್ಮನ ಮೇಲಿನ ಭಕ್ತಿಗೆ ಪವಿತ್ರ ಚರ್ಚಿನ ಜೀವನವೇ ಸ್ಪಷ್ಟವಾದ ಸಾಕ್ಷಿಯಾಗಿದೆ. ಅವರ ಗೌರವಾರ್ಥವಾಗಿ ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಅನೇಕ ದೇವಾಲಯಗಳು, ಪುಣ್ಯಕ್ಷೇತ್ರಗಳು, ಧಾರ್ಮಿಕ ಸಂಸ್ಥೆಗಳು, ಸಂಘಗಳು ಮತ್ತು ಧಾರ್ಮಿಕ ಸಮುದಾಯಗಳು ಅವರ ಆಶ್ರಯವನ್ನು ಸ್ವೀಕರಿಸಿವೆ. ಅವರ ಸ್ತುತಿ ಹಾಗೂ ಗೌರವಾರ್ಥವಾಗಿ ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ಅವರ ಸ್ತುತಿ ಹಾಗೂ ಗೌರವಾರ್ಥವಾಗಿ ಅನೇಕ ಪ್ರಾರ್ಥನೆಗಳು, ಸ್ತೋತ್ರಗಳು ಮತ್ತು ಭಕ್ತಿಗೀತೆಗಳು ರಚಿಸಲ್ಪಟ್ಟಿವೆ. ಈ ನಿರಂತರ ಭಕ್ತಿ ಪರಂಪರೆ, ಮರಿಯಮ್ಮನ ಸ್ಥಾನವು ಧರ್ಮಸಭೆಯ ಆಧ್ಯಾತ್ಮಿಕ ಜೀವನದಲ್ಲಿ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ವ್ಯಕ್ತಪಡಿಸುತ್ತದೆ.[11]

ಮರಿಯಮ್ಮನಿಗೆ ಸಲ್ಲಿಸುವ ಗೌರವವು ಕ್ರಿಸ್ತನಿಗೆ ಪ್ರಿಯವಾದದ್ದು

ರೇಮಂಡರ ಪ್ರಕಾರ, ಮರಿಯಮ್ಮನನ್ನು ಪ್ರೀತಿಸಿ ಗೌರವಿಸುವುದು ಯೇಸುಕ್ರಿಸ್ತನಿಗೆ ಅತ್ಯಂತ ಪ್ರಿಯವಾಗಿದೆ. ತನ್ನ ತಾಯಿಯ ಗೌರವವನ್ನು ಯೇಸು ವಿಶೇಷವಾಗಿ ಎತ್ತಿಹಿಡಿದನು. ಗಲಿಲಾಯದ ಕಾನಾದ ಮದುವೆಯಲ್ಲಿ ದ್ರಾಕ್ಷರಸ ಮುಗಿದಾಗ, ಮರಿಯಮ್ಮ ಆ ಅಗತ್ಯವನ್ನು ಯೇಸುವಿನ ಗಮನಕ್ಕೆ ತಂದರು. ನಂತರ ಯೇಸು ನೀರನ್ನು ದ್ರಾಕ್ಷಾರಸವನ್ನಾಗಿ ಪರಿವರ್ತಿಸಿ ತನ್ನ ಮೊದಲ ಅದ್ಭುತವನ್ನು ಪ್ರಕಟಿಸಿದನು(ಯೋಹಾನ 2:1–11) ಈ ಘಟನೆ ಮರಿಯಮ್ಮನ ಮಧ್ಯಸ್ಥಿಕೆಯ ಮಹತ್ವವನ್ನು ಸೂಚಿಸುತ್ತದೆ. ಕಾನಾ ಮದುವೆಯ ಸಂದರ್ಭದಲ್ಲಿ ದ್ರಾಕ್ಷಾರಸ ಮುಗಿದುಹೋಗಿರುವುದನ್ನು ಮಾತೆ ಮರಿಯಮ್ಮ ಗಮನಿಸಿದ ಘಟನೆಗೆ ಯಹೂದಿ ವಿವಾಹ ಸಂಪ್ರದಾಯ, ಆತಿಥ್ಯ ಮತ್ತು ಮರಿಯಮ್ಮನ ಕಾಳಜಿಯ ದೃಷ್ಟಿಯಿಂದ ಆಳವಾದ ಅರ್ಥವಿದೆ.

ಯಹೂದಿ ವಿವಾಹದಲ್ಲಿ ದ್ರಾಕ್ಷರಸದ ಮಹತ್ವ: ಯಹೂದ್ಯರ ವಿವಾಹವು ಕೇವಲ ಇಬ್ಬರು ವ್ಯಕ್ತಿಗಳ ವೈವಾಹಿಕ ಒಡಂಬಡಿಕೆಯಲ್ಲ; ಅದು ಕುಟುಂಬ ಮತ್ತು ಸಮುದಾಯದ ಪ್ರಮುಖ ಸಾಮಾಜಿಕ–ಧಾರ್ಮಿಕ ಆಚರಣೆಯಾಗಿತ್ತು. ವಿವಾಹದ ಔತಣವು ಹಲವು ದಿನಗಳವರೆಗೆ ನಡೆಯಬಹುದಾಗಿತ್ತು. ಅತಿಥಿಗಳಿಗೆ ಸಾಕಷ್ಟು ಆಹಾರ ಮತ್ತು ದ್ರಾಕ್ಷರಸವನ್ನು ಒದಗಿಸುವುದು ಆತಿಥೇಯ ಕುಟುಂಬದ ಪ್ರಮುಖ ಕರ್ತವ್ಯವಾಗಿತ್ತು. ಆದ್ದರಿಂದ ಔತಣದ ಮಧ್ಯದಲ್ಲಿ ದ್ರಾಕ್ಷರಸ ಮುಗಿದು ಹೋಗುವುದು ಆತಿಥೇಯರಿಗೆ ದೊಡ್ಡ ಮುಜುಗರದ ಸಂಗತಿಯಾಗಬಹುದಾಗಿತ್ತು.[12]

ದ್ರಾಕ್ಷರಸವು ಆ ಕಾಲದ ಊಟದ ಅವಿಭಾಜ್ಯ ಭಾಗವಾಗಿತ್ತು. ಜೊತೆಗೆ ಅದು ಸಂತೋಷ, ಸಮೃದ್ಧಿ, ಹಬ್ಬ, ಮತ್ತು ದೇವರ ಆಶೀರ್ವಾದದ ಸಂಕೇತವಾಗಿಯೂ ಕಾಣಲಾಗುತ್ತಿತ್ತು. ಹೀಗಾಗಿ ಮದುವೆಯ ಔತಣದ ದ್ರಾಕ್ಷರಸ ಮುಗಿಯುವುದು ಕೇವಲ ಒಂದು ಪಾನೀಯದ ಕೊರತೆಯಲ್ಲ; ವಿವಾಹ ಸಂಭ್ರಮದಲ್ಲಿ ಉಂಟಾದ

ಗಂಭೀರ ಸಾಮಾಜಿಕ ಕೊರತೆಯಾಗಿ ಪರಿಗಣಿಸಬಹುದಾಗಿತ್ತು.[13]

ಮರಿಯಮ್ಮನವರು ದ್ರಾಕ್ಷರಸ ಮುಗಿದಿರುವುದನ್ನು ಗಮನಿಸಲು ಕಾರಣ: ಯೋಹಾನ 2:1–11ರಲ್ಲಿ ಕಾನಾದ ಮದುವೆಯ ಸಂದರ್ಭದಲ್ಲಿ ''ದ್ರಾಕ್ಷಾರಸ ಮುಗಿಯಿತು'' ಎಂದು ಮರಿಯಮ್ಮ ಯೇಸುವಿಗೆ ತಿಳಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮರಿಯಮ್ಮ ಮದುವೆಯ ಮನೆಯವರ ಪರವಾಗಿ ಯಾವುದೇ ದೊಡ್ಡ ಬೇಡಿಕೆಯನ್ನು ಮಾಡುವುದಿಲ್ಲ. ಅವರು ಕೇವಲ ಪರಿಸ್ಥಿತಿಯನ್ನು ಗಮನಿಸಿ ಯೇಸುವಿನ ಗಮನಕ್ಕೆ ತರುತ್ತಾರೆ:

ಮರಿಯಮ್ಮನ ಗಮನಿಸುವಿಕೆ ಕೇವಲ ಮಾನವೀಯ ಕಾಳಜಿಯೇ?: ಮಾನವೀಯ ಕಾಳಜಿ ಖಂಡಿತವಾಗಿಯೂ ಇದೆ. ಆದರೆ ಯೋಹಾನನ ಸುವಾರ್ತೆಯ ಆಳವಾದ ಧಾರ್ಮಿಕ ಅರ್ಥದಲ್ಲಿ ಈ ಘಟನೆ ಅದಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತದೆ. ಕಾನಾದಲ್ಲಿ ಯೇಸು ನೀರನ್ನು ದ್ರಾಕ್ಷಾರಸವನ್ನಾಗಿ ಪರಿವರ್ತಿಸುವ ಮೂಲಕ ತನ್ನ ಮಹಿಮೆಯನ್ನು ಪ್ರಕಟಿಸಲು ಆರಂಭಿಸಿದರು.[14] ಆದ್ದರಿಂದ ಮರಿಯಮ್ಮನ ಮಾತು ಕೇವಲ ಒಂದು ಸಾಮಾಜಿಕ ಸಮಸ್ಯೆಯನ್ನು ಯೇಸುವಿಗೆ ತಿಳಿಸುವುದಲ್ಲ; ಅದು ಮಾನವೀಯ ಕೊರತೆಯನ್ನು ದೈವಿಕ ಅನುಗ್ರಹದ ಕಡೆಗೆ ಕೊಂಡೊಯ್ಯುವ ಮಧ್ಯಸ್ಥಿಕೆಯ ಸಂಕೇತವಾಗುತ್ತದೆ.[15]

''ಅವರಿಗೆ ದ್ರಾಕ್ಷಾರಸವಿಲ್ಲ'' ಎಂಬ ಮಾತಿನ ಆಧ್ಯಾತ್ಮಿಕ ಅರ್ಥ: ಮರಿಯಮ್ಮನ ಮಾತನ್ನು ಆಧ್ಯಾತ್ಮಿಕವಾಗಿ ನೋಡಿದಾಗ, ಮನುಷ್ಯನ ಜೀವನದಲ್ಲಿರುವ ವಿವಿಧ ರೀತಿಯ ''ಕೊರತೆಗಳನ್ನು'' ಯೇಸುವಿನ ಮುಂದೆ ತರುವ ಅವರ ಪಾತ್ರವನ್ನು ಇದು ಸೂಚಿಸುತ್ತದೆ.[16]

- ದುಃಖದಲ್ಲಿರುವವರಿಗೆ– ಸಾಂತ್ವನದ ಕೊರತೆ
- ನಿರಾಶರಾದವರಿಗೆ– ಭರವಸೆಯ ಕೊರತೆ
- ಪಾಪದಲ್ಲಿ ಸಿಲುಕಿದವರಿಗೆ– ಕೃಪೆಯ ಅಗತ್ಯ
- ಸಂಕಷ್ಟದಲ್ಲಿರುವವರಿಗೆ– ಸಹಾಯದ ಅಗತ್ಯ
- ಆತ್ಮೀಯ ಜೀವನದಲ್ಲಿ ಬರಡಾಗಿರುವವರಿಗೆ– ದೇವರ ಅನುಗ್ರಹದ ಅಗತ್ಯ

ಹೀಗಾಗಿ ''ಅವರಿಗೆ ದ್ರಾಕ್ಷಾರಸವಿಲ್ಲ'' ಎಂಬ ಮರಿಯಮ್ಮನ ಮಾತನ್ನು ಇತರರ ಅಗತ್ಯವನ್ನು ತಮ್ಮ ಅಗತ್ಯವೆಂದು ಕಂಡು ಅದನ್ನು ಕ್ರಿಸ್ತನ ಮುಂದೆ ಅರ್ಪಿಸುವ ತಾಯಿಯ ಹೃದಯದ ಅಭಿವ್ಯಕ್ತಿಯಾಗಿ ಅರ್ಥೈಸಬಹುದು.

ಸಂಶೋಧನಾ ದೃಷ್ಟಿಯಿಂದ ವಿಶ್ಲೇಷಣೆ

ಕಾನಾದ ಮದುವೆಯಲ್ಲಿ ದ್ರಾಕ್ಷಾರಸ ಮುಗಿದಿರುವುದನ್ನು ಮರಿಯಮ್ಮ ಗಮನಿಸಿದ ಘಟನೆ ಅವರ ಸೂಕ್ಷ್ಮ ಅವಲೋಕನ, ಸಹಾನುಭೂತಿ, ಪರರ ಕಷ್ಟದ

ಬಗ್ಗೆ ಕಾಳಜಿ, ವಿನಯಪೂರ್ವಕ ಮಧ್ಯಸ್ಥಿಕೆ ಮತ್ತು ಕ್ರಿಸ್ತನ ಕಡೆಗೆ ದಾರಿ ತೋರಿಸುವ ತಾಯಿಯ ಪಾತ್ರವನ್ನು ವ್ಯಕ್ತಪಡಿಸುತ್ತದೆ. ಯಹೂದಿ ವಿವಾಹದ ಆತಿಥ್ಯ ಪರಂಪರೆಯಲ್ಲಿ ದ್ರಾಕ್ಷಾರಸದ ಕೊರತೆ ಕುಟುಂಬಕ್ಕೆ ಮುಜುಗರ ಮತ್ತು ಸಾಮಾಜಿಕ ಸಂಕಷ್ಟವನ್ನು ಉಂಟುಮಾಡಬಹುದಾಗಿದ್ದರಿಂದ, ಮರಿಯಮ್ಮ ಅದನ್ನು ಗಮನಿಸಿ ಯೇಸುವಿನ ಗಮನಕ್ಕೆ ತಂದರು. ಆದರೆ ಯೋಹಾನನ ಸುವಾರ್ತೆಯ ಪ್ರಕಾರ ಈ ಘಟನೆ ಕೇವಲ ಸಾಮಾಜಿಕ ಸಮಸ್ಯೆಯ ಪರಿಹಾರವಲ್ಲ; ಯೇಸುವಿನ ಮಹಿಮೆಯ ಪ್ರಕಟಣೆಗೆ ಕಾರಣವಾದ ಮೊದಲ ಸೂಚಕ ಕಾರ್ಯವಾಗಿದೆ. ಆದ್ದರಿಂದ ಕಾನಾದ ಮರಿಯಮ್ಮ ಮಾನವೀಯ ಅಗತ್ಯವನ್ನು ಗುರುತಿಸಿ, ಅದನ್ನು ಕ್ರಿಸ್ತನ ಮುಂದೆ ಅರ್ಪಿಸಿ, ಕ್ರಿಸ್ತನ ಮಾತಿಗೆ ವಿಧೇಯರಾಗುವಂತೆ ಜನರನ್ನು ಪ್ರೇರೇಪಿಸುವ ಮಧ್ಯಸ್ಥ ತಾಯಿಯಾಗಿ ಚಿತ್ರಿಸಲ್ಪಡುತ್ತಾರೆ.

ಪ್ರಸ್ತುತ ಜಗತ್ತಿನಲ್ಲಿ ಮಹಿಳೆಯರಿಗೆ ಮಾತೆ ಮರಿಯಮ್ಮನ ಆದರ್ಶ

ಪ್ರಸ್ತುತ ಜಗತ್ತು ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಆರ್ಥಿಕತೆ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವೇಗವಾಗಿ ಪರಿವರ್ತನೆಯಾಗುತ್ತಿದೆ. ಈ ಬೆಳವಣಿಗೆಯ ನಡುವೆಯೂ ಸ್ತ್ರೀಯರು ಅಸಮಾನತೆ, ಶೋಷಣೆ, ಹಿಂಸೆ, ವಸ್ತುಕರಣ, ಕುಟುಂಬ ಮತ್ತು ವೃತ್ತಿಜೀವನದ ಒತ್ತಡ, ಸಾಮಾಜಿಕ ನಿರ್ಲಕ್ಷ್ಯ ಹಾಗೂ ತಮ್ಮ ವ್ಯಕ್ತಿತ್ವವನ್ನು ಸಾಬೀತುಪಡಿಸುವ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮಾತೆ ಮರಿಯಮ್ಮನ ವ್ಯಕ್ತಿತ್ವವು ಸ್ತ್ರೀಯರ ಗೌರವ, ಸ್ವಾತಂತ್ರ್ಯ ಜವಾಬ್ದಾರಿ ಮತ್ತು ಆಂತರಿಕ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಮಹತ್ವದ ಮಾದರಿಯನ್ನು ಒದಗಿಸುತ್ತದೆ. ಪೋಪ್ ಜಾನ್ ಪಾಲ್ II Mulieris Dignitatemನಲ್ಲಿ ಮರಿಯಮ್ಮನನ್ನು ವಿಶೇಷವಾಗಿ ಪರಿಗಣಿಸುತ್ತಾರೆ. ಸ್ತ್ರೀಯರ ಘನತೆ ಮತ್ತು ಕರೆಯನ್ನು ಕ್ರೈಸ್ತ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುವಲ್ಲಿ ಮರಿಯಮ್ಮನ ವ್ಯಕ್ತಿತ್ವವು ಕೇಂದ್ರ ಸ್ಥಾನವನ್ನು ಹೊಂದಿದೆ.

1. ದೇವರ ಕರೆಗೆ ಧೈರ್ಯದಿಂದ ಪ್ರತಿಕ್ರಿಯಿಸಿದ ಮಹಿಳೆ:

ನಜರೇತಿನಲ್ಲಿ ದೇವದೂತನು ದೇವರ ಯೋಜನೆಯನ್ನು ತಿಳಿಸಿದಾಗ ಮರಿಯಮ್ಮ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡು ವಿಶ್ವಾಸದಿಂದ ಪ್ರತಿಕ್ರಿಯಿಸಿದರು: ''ನಾನು ಕರ್ತನ ದಾಸಿ; ನಿನ್ನ ಮಾತಿನಂತೆ ನನಗಾಗಲಿ''(ಲೂಕ 1:38). ಇದು ಅಂಧ ವಿಧೇಯತೆಯಲ್ಲ; ದೇವರ ಚಿತ್ತವನ್ನು ಸ್ವೀಕರಿಸುವ ಜಾಗೃತ ನಂಬಿಕೆಯ ಅಭಿವ್ಯಕ್ತಿಯಾಗಿದೆ. ಇಂದಿನ ಸ್ತ್ರೀಯರಿಗೆ ಇದರ ಸಂದೇಶವೆಂದರೆ, ಜೀವನದ ಮಹತ್ವದ ನಿರ್ಧಾರಗಳನ್ನು ಭಯದಿಂದ ಅಥವಾ ಸಾಮಾಜಿಕ ಒತ್ತಡದಿಂದ ಮಾತ್ರ ಕೈಗೊಳ್ಳದೆ, ವಿವೇಕ, ನಂಬಿಕೆ ಮತ್ತು ಜವಾಬ್ದಾರಿಯೊಂದಿಗೆ ನಿರ್ಧರಿಸುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು. ಮರಿಯಮ್ಮನ ''ಹೌದು'' ಮಹಿಳೆಯ ಆತ್ಮಗೌರವ ಮತ್ತು ನಿರ್ಧಾರ ಸಾಮರ್ಥ್ಯದ ಆಧ್ಯಾತ್ಮಿಕ ಸಂಕೇತವಾಗಿದೆ. Mulieris Dignitatem ಮರಿಯಮ್ಮನ ''ಹೌದು''ವನ್ನು ದೇವರ ಯೋಜನೆಗೆ ಮಹಿಳೆಯ ಸ್ವತಂತ್ರ ನಂಬಿಕೆಯ

ಪ್ರತಿಕ್ರಿಯೆಯಾಗಿ ನಿರೂಪಿಸುತ್ತದೆ.

2. ಸೇವಾಭಾವದ ಆದರ್ಶ

ದೇವದೂತನ ಸಂದೇಶವನ್ನು ಸ್ವೀಕರಿಸಿದ ನಂತರ ಮರಿಯಮ್ಮ ತಮ್ಮ ಬಗ್ಗೆ ಮಾತ್ರ ಚಿಂತಿಸದೆ, ಗರ್ಭಿಣಿಯಾಗಿದ್ದ ಎಲಿಜಬೆತ್ತಳಿಗೆ ನೆರವಾಗಲು ಯೂದಾಯದ ಬೆಟ್ಟ ಪ್ರದೇಶಕ್ಕೆ ತೆರಳಿದರು.[17] ಅವರು ಕೆಲವು ತಿಂಗಳುಗಳ ಕಾಲ ಅಲ್ಲಿದ್ದು ಎಲಿಜಬೆತ್ತಳಿಗೆ ಸೇವೆ ಸಲ್ಲಿಸಿದರು.[18] ಇದರಿಂದ ಮರಿಯಮ್ಮನ ಆಧ್ಯಾತ್ಮಿಕತೆ ಕೇವಲ ಪ್ರಾರ್ಥನೆಗೆ ಸೀಮಿತವಾಗಿರದೆ ಕ್ರಿಯಾತ್ಮಕ ಸೇವೆಯಾಗಿ ರೂಪುಗೊಂಡಿತು ಎಂಬುದು ಸ್ಪಷ್ಟವಾಗುತ್ತದೆ. ಏಷ್ಯಾದ ಚರ್ಚಿನ ಅಧಿಕೃತ ದಾಖಲೆಯೂ ಮರಿಯಮ್ಮನನ್ನು "ಸೇವೆಯ ಮಹಿಳೆ"ಯಾಗಿ ಚಿತ್ರಿಸಿ, ಕ್ರಿಸ್ತನನ್ನು ಇತರರಿಗೆ ತಲುಪಿಸುವ ಮಾದರಿಯೆಂದು ವಿವರಿಸುತ್ತದೆ. ಇಂದಿನ ಉದಾಹರಣೆ: ಶಿಕ್ಷಕಿ, ವೈದ್ಯೆ, ನರ್ಸ್, ಸಮಾಜ ಸೇವಕಿ, ಧಾರ್ಮಿಕ ಸನ್ಯಾಸಿನಿ, ತಾಯಿ, ಆಡಳಿತಗಾರ್ತಿ ಅಥವಾ ಸ್ವಯಂಸೇವಕಿಯಾಗಿ ಕಾರ್ಯನಿರ್ವಹಿಸುವ ಮಹಿಳೆ ತನ್ನ ಜ್ಞಾನ ಮತ್ತು ಸಾಮರ್ಥ್ಯವನ್ನು ದುರ್ಬಲರು, ಬಡವರು, ವೃದ್ಧರು, ಮಕ್ಕಳು ಮತ್ತು ಸಂಕಷ್ಟದಲ್ಲಿರುವವರ ಒಳಿತಿಗಾಗಿ ಬಳಸಿದಾಗ ಮರಿಯಮ್ಮನ ಸೇವಾ ಮಾದರಿಯನ್ನು ಅನುಸರಿಸುತ್ತಾಳೆ.

3. ವಿನಯ ಮತ್ತು ಆತ್ಮಗೌರವದ ಸಮನ್ವಯ

ಮರಿಯಮ್ಮ ವಿನಯಶೀಲರಾಗಿದ್ದರೂ ದುರ್ಬಲ ವ್ಯಕ್ತಿಯಾಗಿರಲಿಲ್ಲ. ಮರಿಯಮ್ಮನವರ ಸ್ತುತಿಗೀತೆಯಲ್ಲಿ ಅವರು ದೇವರು ತಮ್ಮಲ್ಲಿ "ಮಹತ್ಕಾರ್ಯಗಳನ್ನು" ಮಾಡಿದ್ದಾರೆ ಎಂದು ಘೋಷಿಸುತ್ತಾರೆ.[19] ಇಲ್ಲಿ ವಿನಯವೆಂದರೆ ತನ್ನ ಸಾಮರ್ಥ್ಯವನ್ನು ನಿರಾಕರಿಸುವುದಲ್ಲ; ತನ್ನಲ್ಲಿರುವ ವರಗಳ ಮೂಲ ದೇವರೇ ಎಂಬುದನ್ನು ಅರಿತು ಅವುಗಳನ್ನು ಸತ್ಕಾರ್ಯಕ್ಕೆ ಬಳಸುವುದು. ಇಂದಿನ ಮಹಿಳೆಯರಿಗೆ ಇದು ಅತ್ಯಂತ ಪ್ರಸ್ತುತವಾದ ಸಂದೇಶವಾಗಿದೆ. ವಿನಯವು ಆತ್ಮಹೀನತೆಯಲ್ಲ; ಆತ್ಮಗೌರವವು ಅಹಂಕಾರವಲ್ಲ. ತನ್ನ ಸಾಮರ್ಥ್ಯವನ್ನು ಅರಿತುಕೊಂಡು ಅದನ್ನು ಜವಾಬ್ದಾರಿಯಿಂದ ಉಪಯೋಗಿಸುವುದು ಮರಿಯಮ್ಮನ ವ್ಯಕ್ತಿತ್ವದಿಂದ ಕಲಿಯಬಹುದಾದ ಪ್ರಮುಖ ಮೌಲ್ಯವಾಗಿದೆ.

4. ಸ್ತ್ರೀಯರ ಘನತೆ ಮತ್ತು ವ್ಯಕ್ತಿತ್ವದ ಮಾದರಿ

ಮರಿಯಮ್ಮನ ಮೂಲಕ ಸ್ತ್ರೀತ್ವವು ಕೇವಲ ದೈಹಿಕ ಅಥವಾ ಕುಟುಂಬದ ಪಾತ್ರಕ್ಕೆ ಸೀಮಿತವಾಗುವುದಿಲ್ಲ. ದೇವರ ಯೋಜನೆಯಲ್ಲಿ ಒಬ್ಬ ಮಹಿಳೆಯ ಸ್ವತಂತ್ರ ವ್ಯಕ್ತಿತ್ವಕ್ಕೂ ಮಹತ್ವವಿದೆ ಎಂಬುದನ್ನು ಅವರ ಜೀವನವು ತೋರಿಸುತ್ತದೆ. ಪೋಪ್ ಜಾನ್ ಪಾಲ್ II ಅವರು ಮರಿಯಮ್ಮನನ್ನು "ಪೂರ್ಣತೆಯನ್ನು ಹೊಂದಿದ ಮಹಿಳೆ"ಯ ಮಾದರಿಯಾಗಿ ಸೂಚಿಸಿ, ಸ್ತ್ರೀಯರು ತಮ್ಮ ಸ್ತ್ರೀತ್ವವನ್ನು ಘನತೆಯಿಂದ ಬದುಕುವ ಮಾರ್ಗವನ್ನು ಅವರಲ್ಲಿ ಕಾಣಬಹುದು ಎಂದು ಹೇಳಿದ್ದಾರೆ.[20] ಆದ್ದರಿಂದ

ಆಧುನಿಕ ಮಹಿಳೆ ತನ್ನ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವುದರ ಜೊತೆಗೆ ಶಿಕ್ಷಣ, ಸಂಶೋಧನೆ, ಕಲೆ, ವಿಜ್ಞಾನ, ಆಡಳಿತ, ಧಾರ್ಮಿಕ ಸೇವೆ, ಸಾಮಾಜಿಕ ಕಾರ್ಯ ಮತ್ತು ಇತರ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ತನ್ನ ಕೊಡುಗೆಯನ್ನು ನೀಡಬಹುದು.

5. ಕಾನಾದಲ್ಲಿ ಸೂಕ್ಷ್ಮ ಗಮನ ಮತ್ತು ನಾಯಕತ್ವ

ಕಾನಾದ ಮದುವೆಯಲ್ಲಿ ದ್ರಾಕ್ಷರಸ ಮುಗಿದಿರುವುದನ್ನು ಮರಿಯಮ್ಮ ಗಮನಿಸಿದರು.[21] ಅವರು ಸಮಸ್ಯೆಯನ್ನು ಗುರುತಿಸಿ ಯೇಸುವಿನ ಗಮನಕ್ಕೆ ತಂದರು. ಅವರ ಮಧ್ಯಸ್ಥಿಕೆ ಮೌನವಾಗಿದ್ದರೂ ಪರಿಣಾಮಕಾರಿಯಾಗಿತ್ತು. ಪೋಪ್ ಜಾನ್ ಪಾಲ್ II ಅವರು ಕಾನಾದಲ್ಲಿ ಮರಿಯಮ್ಮನ ಪಾತ್ರವನ್ನು "ವಿವೇಚನಾಶೀಲ ಮತ್ತು ಪರಿಣಾಮಕಾರಿ" ಮಧ್ಯಸ್ಥಿಕೆಯಾಗಿ ವಿವರಿಸಿದ್ದಾರೆ. ಇದು ಇಂದಿನ ಮಹಿಳೆಯರಿಗೆ ನಾಯಕತ್ವದ ವಿಶಿಷ್ಟ ಮಾದರಿಯನ್ನು ನೀಡುತ್ತದೆ. ನಾಯಕತ್ವ ಎಂದರೆ ಯಾವಾಗಲೂ ಅಧಿಕಾರ ಪ್ರದರ್ಶಿಸುವುದಲ್ಲ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುವುದು, ಸಮಸ್ಯೆಯನ್ನು ಗುರುತಿಸುವುದು, ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳುವುದು ಮತ್ತು ಇತರರ ಒಳಿತಿಗಾಗಿ ಪರಿಹಾರಕ್ಕೆ ದಾರಿಮಾಡಿಕೊಡುವುದು ಕೂಡ ನಾಯಕತ್ವವೇ ಆಗಿದೆ.

6. ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿ

ಸ್ತುತಿಗೀತೆಯಲ್ಲಿ ಮರಿಯಮ್ಮ ದೇವರ ಕರುಣೆ, ದೀನರ ಮೇಲಿನ ಕಾಳಜಿ ಮತ್ತು ಸಾಮಾಜಿಕ ಪರಿವರ್ತನೆಯ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತಾ[22] ಅಧಿಕಾರಿಗಳು ಕೆಳಗಿಳಿಸಲ್ಪಟ್ಟು ದೀನರು ಮೇಲಕ್ಕೆತ್ತಲ್ಪಡುವರು; ಹಸಿದವರು ಒಳ್ಳೆಯವುಗಳಿಂದ ತುಂಬಲ್ಪಡುವರು ಎಂಬ ಅವರ ಘೋಷಣೆ ದೇವರ ರಾಜ್ಯದ ನ್ಯಾಯಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. Redemptoris Materನಲ್ಲಿ ಪೋಪ್ ಜಾನ್ ಪಾಲ್ II ಅವರು ಮರಿಯಮ್ಮನವರ ಸ್ತುತಿಗೀತೆಯನ್ನು ಬಡವರು ವಿನಮ್ರರ ಪರವಾಗಿ ದೇವರ ಕರುಣೆಯನ್ನು ಘೋಷಿಸುವ ಸ್ತುತಿಗೀತೆಯಾಗಿ ವಿವರಿಸುತ್ತಾರೆ. ಮರಿಯಮ್ಮನ ನಂಬಿಕೆ ಮತ್ತು ಬಡವರ ಮೇಲಿನ ದೇವರ ವಿಶೇಷ ಕಾಳಜಿಯನ್ನು ಬೇರ್ಪಡಿಸಲಾಗುವುದಿಲ್ಲ ಎಂದು ಅವರು ಸೂಚಿಸುತ್ತಾರೆ. ಆದ್ದರಿಂದ ಇಂದಿನ ಮಹಿಳೆಯರು ಬಡತನ, ಅನ್ಯಾಯ, ಲಿಂಗಭೇದ, ಹಿಂಸೆ, ಶಿಕ್ಷಣದ ಕೊರತೆ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಮಾನವೀಯ ಹಾಗೂ ನ್ಯಾಯಪರ ಮನೋಭಾವದಿಂದ ಕೆಲಸ ಮಾಡುವ ಪ್ರೇರಣೆಯನ್ನು ಮರಿಯಮ್ಮನಿಂದ ಪಡೆಯಬಹುದು.

7. ಕುಟುಂಬ ಮತ್ತು ಸಮಾಜದ ನಡುವೆ ಸಮತೋಲನ

ಮರಿಯಮ್ಮನ ಜೀವನದಲ್ಲಿ ಕುಟುಂಬಪರ ಕಾಳಜಿ ಮತ್ತು ದೇವರ ಕರೆಯ ನಡುವಿನ ಸಮನ್ವಯ ಕಾಣುತ್ತದೆ. ಅವರು ಯೇಸುವಿನ ತಾಯಿಯಾಗಿ ಕುಟುಂಬದ

ಜವಾಬ್ದಾರಿಯನ್ನು ನಿರ್ವಹಿಸಿದರೂ, ಕಾನಾ, ಶಿಲುಬೆ ಮತ್ತು ಆರಂಭಿಕ ಕ್ರೈಸ್ತ ಸಮುದಾಯದ ಸಂದರ್ಭಗಳಲ್ಲಿ ತಮ್ಮ ನಂಬಿಕೆಯ ಸಾಕ್ಷಿಯನ್ನು ಮುಂದುವರಿಸಿದರು. ಇಂದಿನ ಮಹಿಳೆಗೆ ಇದರ ಅರ್ಥ ಕುಟುಂಬ ಮತ್ತು ಸಮಾಜ ಎಂಬ ಎರಡು ಕ್ಷೇತ್ರಗಳಲ್ಲಿ ತನ್ನ ಜವಾಬ್ದಾರಿಗಳನ್ನು ಸಮತೋಲನದಿಂದ ನಿರ್ವಹಿಸುವುದು. ಕುಟುಂಬದ ಕಾಳಜಿಯ ಜೊತೆಗೆ ಸಮಾಜದ ಒಳಿತಿಗಾಗಿ ತನ್ನ ಪ್ರತಿಭೆ ಮತ್ತು ಸಮಯವನ್ನು ಬಳಸುವುದೂ ಮಹಿಳೆಯ ಸಾರ್ಥಕ ಕೊಡುಗೆಯಾಗಿದೆ.

8. ಸಂಕಷ್ಟದಲ್ಲಿ ಸ್ಥೈರ್ಯದ ಮಾದರಿ

ಬೆತ್ಲೆಹೇಮಿನ ಅನಿಶ್ಚಿತತೆ, ಈಜಿಪ್ಟಿನ ನಿರಾಶ್ರಿತ ಜೀವನ, ಯೇಸುವಿನ ಬಾಲ್ಯದ ಸಂದರ್ಭಗಳು ಮತ್ತು ವಿಶೇಷವಾಗಿ ಶಿಲುಬೆಯ ಪಾದದ ದುಃಖ– ಇವೆಲ್ಲದರಲ್ಲಿಯೂ ಮರಿಯಮ್ಮ ನಂಬಿಕೆಯನ್ನು ಕಳೆದುಕೊಳ್ಳದೆ ನಿಂತರು. ಅವರ ಸ್ಥೈರ್ಯವು ಸಂಕಷ್ಟದಿಂದ ತಪ್ಪಿಸಿಕೊಳ್ಳುವುದಕ್ಕಿಂತ, ಕಷ್ಟದ ಮಧ್ಯೆಯೂ ಅರ್ಥ ಮತ್ತು ಭರವಸೆಯನ್ನು ಹುಡುಕುವ ಮನೋಭಾವವನ್ನು ತೋರಿಸುತ್ತದೆ. ಇಂದಿನ ಮಹಿಳೆಯರು ವೈಯಕ್ತಿಕ ದುಃಖ, ಕುಟುಂಬದ ಸಮಸ್ಯೆ, ಆರ್ಥಿಕ ಸಂಕಷ್ಟ, ಉದ್ಯೋಗದ ಒತ್ತಡ ಅಥವಾ ಸಾಮಾಜಿಕ ಸವಾಲುಗಳನ್ನು ಎದುರಿಸುವಾಗ ಮರಿಯಮ್ಮನ ಸ್ಥೈರ್ಯದಿಂದ ಪ್ರೇರಣೆ ಪಡೆಯಬಹುದು.[23]

ಸಂಶೋಧನಾ ದೃಷ್ಟಿಯಿಂದ ಸಮಗ್ರ ಮೌಲ್ಯಮಾಪನ

ಪ್ರಸ್ತುತ ಜಗತ್ತಿನಲ್ಲಿ ಮಾತೆ ಮರಿಯಮ್ಮರನ್ನು ಸ್ತ್ರೀಯರಿಗೆ ಆದರ್ಶವೆಂದು ಪರಿಗಣಿಸುವುದು ಕೇವಲ ಧಾರ್ಮಿಕ ಭಕ್ತಿಯ ವಿಷಯವಲ್ಲ. ಅವರ ಜೀವನದಲ್ಲಿ ನಂಬಿಕೆ, ನಿರ್ಧಾರಶಕ್ತಿ, ಸೇವೆ, ವಿನಯ, ಆತ್ಮಗೌರವ, ಸೂಕ್ಷ್ಮ ಅವಲೋಕನ, ಸಾಮಾಜಿಕ ಕಾಳಜಿ, ಸಂಕಷ್ಟ ಸಹನೆ ಮತ್ತು ನಾಯಕತ್ವಗಳ ಸಮಗ್ರ ಮಾದರಿಯನ್ನು ಕಾಣಬಹುದು. ದೇವರ ಕರೆಯನ್ನು ಸ್ವೀಕರಿಸಿದ ನಜರೇತಿನ ಯುವತಿಯಿಂದ ಹಿಡಿದು ಎಲಿಜಬೆತ್ತಳಿಗೆ ಸೇವೆ ಸಲ್ಲಿಸಿದ ಸಂಬಂಧಿ, ಕಾನಾದಲ್ಲಿ ಸಮಸ್ಯೆಯನ್ನು ಗುರುತಿಸಿದ ಮಧ್ಯಸ್ಥೆ, ಸ್ತುತಿಗೀತೆಯಲ್ಲಿ ದೀನರ ಪರವಾಗಿ ದೇವರ ನ್ಯಾಯವನ್ನು ಘೋಷಿಸಿದ ಮಹಿಳೆ ಮತ್ತು ಶಿಲುಬೆಯ ಕೆಳಗೆ ಸ್ಥಿರವಾಗಿ ನಿಂತ ತಾಯಿಯವರೆಗೆ–ಮರಿಯಮ್ಮನ ಜೀವನದ ಪ್ರತಿಯೊಂದು ಹಂತವೂ ಸ್ತ್ರೀಯರ ವಿಭಿನ್ನ ಆಯಾಮಗಳಿಗೆ ಅರ್ಥಪೂರ್ಣ ಮಾದರಿಯನ್ನು ನೀಡುತ್ತದೆ.

ಆದ್ದರಿಂದ ಆಧುನಿಕ ಸ್ತ್ರೀಯರಿಗೆ ಮರಿಯಮ್ಮ ''ಮೌನವಾಗಿ ಸಹಿಸುವ ಮಹಿಳೆ'' ಎಂಬ ಏಕಮುಖ ಮಾದರಿಯಲ್ಲ; ನಂಬಿಕೆಯಿಂದ ನಿರ್ಧಾರ ತೆಗೆದುಕೊಳ್ಳುವ, ಸೇವೆಯಲ್ಲಿ ತೊಡಗುವ, ಅನ್ಯಾಯದ ಬಗ್ಗೆ ಕಾಳಜಿ ವಹಿಸುವ, ತನ್ನ ಘನತೆಯನ್ನು ಅರಿಯುವ ಮತ್ತು ಸಮಾಜದ ಒಳಿತಿಗಾಗಿ ತನ್ನ ಸಾಮರ್ಥ್ಯವನ್ನು ಬಳಸುವ ಸಕ್ರಿಯ ವ್ಯಕ್ತಿತ್ವದ ಮಾದರಿಯಾಗಿದ್ದಾರೆ. ಪೋಪ್ ಜಾನ್ ಪಾಲ್ II ಬೋಧನೆಯಲ್ಲಿಯೂ ಮರಿಯಮ್ಮನ ವ್ಯಕ್ತಿತ್ವವು ಸ್ತ್ರೀಯರ ಘನತೆ ಮತ್ತು ಕರ್ತವ್ಯವನ್ನು

ಅರ್ಥಮಾಡಿಕೊಳ್ಳಲು ಪ್ರಮುಖ ಆಧಾರವಾಗಿದೆ.

ಕೊನೆ ಟಿಪ್ಪಣಿಗಳು:

1. ಕಥೋಲಿಕ ಚರ್ಚಿನ ಧರ್ಮಶಿಕ್ಷಣ, ಪು. 971
2. ಎರಡನೇ ವ್ಯಾಟಿಕನ್ ಮಹಾಸಭೆ, ಲುಮೆನ್ ಜೆಂಟಿಯಮ್ (Lumen Gentium) – ನಂ. 55, ಪು. 20
3. ಸಂಸ್ಥಾಪಕರ ವಚನಗಳಿಂದ, ಭಗಿನಿ ಬರ್ತಾ, ಪು. 21
4. ಎರಡನೇ ವ್ಯಾಟಿಕನ್ ಮಹಾಸಭೆ, ಲುಮೆನ್ ಜೆಂಟಿಯಮ್ (Lumen Gentium) – ನಂ. 55, ಪು. 20–21
5. ಕಥೋಲಿಕ ಧರ್ಮಸಭೆಯ ಧರ್ಮಶಿಕ್ಷಣ, ಪ್ಯಾರಾ 484–486
6. ಕಥೋಲಿಕ ಧರ್ಮಸಭೆಯ ಧರ್ಮಶಿಕ್ಷಣ, ಪ್ಯಾರಾ 488
7. ಲೂಕ 1:26–37
8. ಲೂಕ 1:37
9. ಲೂಕ 1:39–40
10. ಲೂಕ 1:41–45
11. ಸಂಸ್ಥಾಪಕರ ವಚನಗಳಿಂದ, ಭಗಿನಿ ಬರ್ತಾ, ಪು. 18
12. ಜಾನ್ ಡಿ. ಕ್ರಾಸನ್, ಸಂತ ಯೋಹಾನರ ಶುಭಸಂದೇಶ, ಪು. 68
13. ಜಾನ್ ಡಿ. ಕ್ರಾಸನ್, ಸಂತ ಯೋಹಾನರ ಶುಭಸಂದೇಶ, ಪು. 68
14. ಯೋಹಾನ 2:11
15. ರೇಮಂಡ್ ಬ್ರೌನ್, ಸಂತ ಯೋಹಾನರ ಶುಭಸಂದೇಶ, ಪು. 96–106
16. ಕಥೋಲಿಕ ಧರ್ಮಸಭೆಯ ಧರ್ಮಶಿಕ್ಷಣ ಗ್ರಂಥ – ಪ್ಯಾರಾ 2618
17. ಲೂಕ 1:39–45
18. ಲೂಕ 1:56
19. ಲೂಕ 1:46–49
20. ಪೋಪ್ ಜಾನ್ ಪಾಲ್ II, ಮುಲೀಯೆರಿಸ್ ಡಿಗ್ನಿಟಾಟೆಮ್ (Mulieris Dignitatem) – ಸಂ. 4, 5, 10, 18, 30
21. ಯೋಹಾನ 2:1–11
22. ಲೂಕ 1:46–55
23. ಎರಡನೇ ವ್ಯಾಟಿಕನ್ ಪರಿಷತ್, ಲುಮೆನ್ ಜೆಂಟಿಯಮ್ (Lumen Gentium), ಸಂ. 56

ಪರಾಮರ್ಶನ ಗ್ರಂಥಗಳು:

1. ಭಗಿನಿ ಬರ್ತಾ, (1949), ಸಂಸ್ಥಾಪಕರ ವಚನಗಳು, ಮಂಗಳೂರು: ಬೆಥನಿ ಪ್ರಕಾಶನ.
2. ಬೈಬಲ್ ಸೊಸೈಟಿ ಆಫ್ ಇಂಡಿಯಾ, (1993), ಪವಿತ್ರ ಬೈಬಲ್ ಹಳೆಯ ಮತ್ತು ಹೊಸ ಒಡಂಬಡಿಕೆಗಳು ಮತ್ತಿತರ ಅನುಗ್ರಂಥಗಳು, ಬೆಂಗಳೂರು: ಬೈಬಲ್ ಸೊಸೈಟಿ ಆಫ್ ಇಂಡಿಯಾ.
3. ಕಥೋಲಿಕ ಚರ್ಚ್, (1994), ಕಥೋಲಿಕ ಚರ್ಚಿನ ಧರ್ಮಶಿಕ್ಷಣ (Catechism of the Catholic Church), ಬೆಂಗಳೂರು: ಥಿಯಲಾಜಿಕಲ್ ಪಬ್ಲಿಕೇಶನ್ ಇನ್ ಇಂಡಿಯಾ.
4. ಪೋಪ್ ಪೌಲ VI, (1974), Marialis Cultus, ವಾಟಿಕನ್: ವಾಟಿಕನ್ ಪ್ರೆಸ್.
5. ಎರಡನೇ ವಾಟಿಕನ್ ಮಹಾಸಭೆ, (1964), Lumen Gentium, ವಾಟಿಕನ್: ವಾಟಿಕನ್ ಪ್ರೆಸ್.
6. ರೇಮಂಡ್ ಇ. ಬ್ರೌನ್, (1966), ಸಂತ ಯೋಹಾನರ ಶುಭಸಂದೇಶ I–XII, ಗಾರ್ಡನ್ ಸಿಟಿ: ಡಬ್ಲ್ಯೂಡೆ.
7. ಬ್ಯಾರೆಟ್ ಸಿ.ಕೆ., (1978), ಸಂತ ಯೋಹಾನರ ಶುಭಸಂದೇಶ, ಲಂಡನ್: ಎಸ್.ಪಿ.ಸಿ.ಕೆ. (SPCK).
8. ಪೋಪ್ ಜಾನ್ ಪಾಲ್ II, (1988), Mulieris Dignitatem, ವಾಟಿಕನ್ ಸಿಟಿ: ವಾಟಿಕನ್ ಪ್ರೆಸ್.
9. ಪೋಪ್ ಜಾನ್ ಪಾಲ್ II, (1987), Redemptoris Mater, ವಾಟಿಕನ್ ಸಿಟಿ: ವಾಟಿಕನ್ ಪ್ರೆಸ್.